ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	298
ಸದಸ್ಯರ ಹೆಸರು	:	ಶ್ರೀ ಆರ್.ಬಿ.ತಿಮ್ಮಾಪುರ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	17.02.2022
ಉತ್ತರಿಸಬೇಕಾದ ಸಚಿವರು	:	ಮುಖ್ಯಮಂತ್ರಿಯವರು

****

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಹಲವಾರು ವರ್ಷಗಳಿಂದಲೂ, ಅಕ್ರಮ ನಿವೇಶನ ಹಂಚಿಕೆ, ಅಕ್ರಮ ಬದಲಿ ನಿವೇಶನ, ಅಕ್ರಮ ಡೀನೋಟಿಫೈ ಮುಂತಾದ ಹಗರಣಗಳು ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
(ಆ)	ಹೌದಾದಲ್ಲಿ, ಇಂತಹ ಅಕ್ರಮಗಳು ಎಂದಿನಿಂದ ನಡೆಯುತ್ತಿದೆ; (ಶಾಮೀಲಾದ ಅಧಿಕಾರಿಗಳ ಪದನಾಮದೊಂದಿಗೆ ವಿವರ ನೀಡುವುದು)	ಕಳೆದ . 05 ವರ್ಷಗಳಲ್ಲಿ ಅಕ್ರಮ ಕೃತ್ಯಗಳಲ್ಲಿ ಶಾಮೀಲಾಗಿದ್ದ ಅಧಿಕಾರಿಗಳು / ಸಿಬ್ಬಂದಿಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವ ವಿವರಗಳನ್ನು ಪದನಾಮ ಗಳೊಂದಿಗೆ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
(ಇ)	ಇದುವರೆಗೂ ಎಷ್ಟು ಸಿಬ್ಬಂದಿ ಮತ್ತು ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸಲಾಗಿದೆ ಹಾಗೂ ಶಿಕ್ಷೆಗೆ ಒಳಗಾದವರ ವಿವರ ಒದಗಿಸುವುದು?	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಕಾರ್ಯನಿರತಪಡೆ ಮತ್ತು ಜಾಗೃತದಳವು ಪ್ರಾಧಿಕಾರದಲ್ಲಿ ನಡೆದಿರುವ ಅಕ್ರಮ ಕೃತ್ಯಗಳ ಬಗ್ಗೆ ವಿಚಾರಣೆ ಕೈಗೊಂಡು ಕಳೆದ 05 ವರ್ಷಗಳಲ್ಲಿ ಅಕ್ರಮ ಕೃತ್ಯಗಳಲ್ಲಿ ಭಾಗಿಯಾಗಿರುವ ಅಧಿಕಾರಿ /ನೌಕರರುಗಳ ವಿರುದ್ಧ ಒಟ್ಟು 26 ಕ್ರಿಮಿನಲ್ ಪ್ರಕರಣಗಳನ್ನು ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದಾಖಲಿಸ ಲಾಗಿದ್ದು, ಈ ಪೈಕಿ 02 ಪ್ರಕರಣಗಳಲ್ಲಿ ಒಟ್ಟು 06 ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ತನಿಖಾಧಿಕಾರಿಗಳು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಉಳಿದ ಪ್ರಕರಣಗಳು ತನಿಖೆಯ ಹಂತದಲ್ಲಿರುತ್ತದೆ.

ಸಂಖ್ಯೆ:ನಅಇ 47 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ

ಕಳೆದ 05 ವರ್ಷಗಳಲ್ಲಿ ಅಕ್ರಮ ಕೃತ್ಯಗಳಲ್ಲಿ ಶಾಮೀಲಾಗಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವ ವಿವರ

ಕ್ರ.ಸಂ	ಪೊಲೀಸ್ ಠಾಣೆ	ಮೊ.ಸಂ	ಕಲಂ.	ಆರೋಪಿತ ಪ್ರಾಧಿಕಾರದ ಅಧಿಕಾರಿಗಳು/ ಸಿಬ್ಬಂದಿಗಳ ವಿವರ
01	ಶೇಷಾದ್ರಿಪುರಂ	30/2017	120ಬಿ 468 471 420 34 ಐಪಿಸಿ	1) ರವಿಕುಮಾರ್.ಎಂ, ಎಸ್.ಡಿ.ಎ 2) ತಿಪ್ಪೇಸ್ವಾಮಿ.ಎನ್,ಎಸ್.ಡಿ.ಎ (ಮಾನ್ಯ 32ನೇ ಎಸಿಎಂಎಂ ನ್ಯಾಯಾಲಯದ ಸಿಸಿ ನಂ: 18565/2018 ರೀತ್ಯಾ ವಿಚಾರಣೆಯಲ್ಲಿರುತ್ತದೆ)
02	ಶೇಷಾದ್ರಿಪುರಂ	89/2020	406,409,467,470,420,471,472,473,474,475, 476 ಐ.ಪಿ.ಸಿ	1)ಶಿವೇಗೌಡ, ಉಪ ಕಾರ್ಯದರ್ಶಿ-3 2)ಕಮಲಮ್ಮ, ಮೇಲ್ವಿಚಾರಕರು 3)ಸಂಪತ್, ವಿಷಯ ನಿರ್ವಾಹಕರು 4)ಪವಿತ್ರಾ, ವಿಷಯ ನಿರ್ವಾಹಕರು (ಮಾನ್ಯ 4ನೇ ಎಸಿಎಂಎಂ ನ್ಯಾಯಾಲಯದ ಸಿಸಿ ನಂ: 5017/2021 ರೀತ್ಯಾ ವಿಚಾರಣೆಯಲ್ಲಿರುತ್ತದೆ)

(signature)

[illegible]
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
[illegible]